**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ06-08-2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೇಕರಿ ಕೆಲಸ ಮಾಡುತ್ತೇನೆ. ಜನಾರ್ಧನ ಗ್ರೂಪ್ ರವರಿಗೆ 9 ಜನ ಮಕ್ಕಳು ಇರುತ್ತಾರೆ. ನಾನು 5 ನೇ ಯವನು ಇರುತ್ತೇನೆ. ಮೃತ ಅನಿಲ್ ಜೆ ರವರು ನನ್ನ ಸಹೋದರ ಇರುತ್ತಾರೆ. ಅವರು 7 ನೇ ಮಗನಾಗಿರುತ್ತಾರೆ. ವಾದಿಯರು ಈ ದಾವೆಯನ್ನು ನಮ್ಮ ಜಾಗದ ಸಲುವಾಗಿ ಹಾಕಿರುತ್ತಾರೆ. ಅವರಿಗೂ ನಮಗೂ ಯಾವುದೇ ಸಂಬಂದ ಇರುವುದಿಲ್ಲ.

ದಾವ ಆಸ್ತಿ ಮೂಲತಃ ನಮ್ಮ ತಂದೆ ತಾಯಿಗೆ ಸೇರಿರುತ್ತದೆ. ನನ್ನ ತಂದೆ ಸುಮಾರು 15 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನನ್ನ ತಾಯಿ ನಾಗಮ್ಮನವರು ಸುಮಾರು 12 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನನ್ನ ತಂದೆ ಮರಣ ಹೊಂದಿರುವ ಬಗ್ಗೆ ದಾಖಲಾತಿ ನೀಡಿರುತ್ತೇನೆ. ದಾವ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ತಂದೆಯ ಹೆಸರಿನಲ್ಲಿ ಇರಲಿಲ್ಲ. 2,3, 6 ರಿಂದ 8 ಮತ್ತು 4 ನೇ ಪ್ರತಿವಾದಿಯ ವಾರಸುದಾರರು ಬೇರೆ ಬೇರೆ ಊರಿನಲ್ಲಿ ಇರುತ್ತಾರೆ ಎಂದರೆ ಸರಿ. ದಾವ ಆಸ್ತಿಯನ್ನು ಮತ್ತು ಅದರಲ್ಲಿ ಇರುವ ಮನೆಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಮೃತ ಅನಿಲ್ ರವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಅವರು ನಮ್ಮ ಮನೆಯ ಪಕ್ಕದ ಮನೆಯಲ್ಲಿ ಇದ್ದ ಪಾವನ ಅಲಿಯಾಸ್ ಪಾರ್ವತಿ ಎಂಬುವವರನ್ನು 1998 ರಲ್ಲಿ ಪ್ರೇಮ ವಿವಾಹವಾಗಿರುತ್ತಾರೆ. ಮದುವೆಯಾದ ನಂತರ ಅವರು ನಮ್ಮ ಮನೆಯಿಂದ ಸುಮಾರು 4-5 ವರ್ಷಗಳ ಕಾಲ ಹೊರಗೆ ಇದ್ದರು. ಯಾವ ಊರಿನಲ್ಲಿ ಇದ್ದರು ಎಂದು ಗೊತ್ತಿಲ್ಲ. ಆನಂತರ ಅವರು ಮರಣ ಹೊಂದಿರುವ ಬಗ್ಗೆ ಗೊತ್ತಾಗಿರುತ್ತದೆ. ಶ್ರೀನಿವಾಸ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಬಂದಾಗ ಮರಣ ಹೊಂದಿರುವ ಬಗ್ಗೆ ತಿಳಿದಿರುತ್ತದೆ. ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ. ಆಸ್ಪತ್ರೆಗೆ ಅನಿಲ್ ರವರು ಎಲ್ಲಿಂದ ಬಂದಿರುತ್ತಾರೆ ಎಂದು ಗೊತ್ತಿಲ್ಲ.

ಅನಿಲ್ ರವರು ಸಕಲೇಶಪುರ ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ಮದುವೆಯಾಗಿರುತ್ತಾರೆ. ಮದುವೆಯ ನೋಂದಾಣಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಅನಿಲ್ ರವರ ಹೆಂಡತಿ ಎಂದರೆ ಸರಿಯಲ್ಲ. 2 ರಿಂದ 4 ನೇ ವಾದಿಯರು ಅನಿಲ್ ಮತ್ತು 1 ನೇ ವಾದಿಯ

ದಾಂಪತ್ಯದಲ್ಲಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ರವರು ದಾವ ಆಸ್ತಿ ಸ್ವಾಧೀನಪಡಿಸಿಕೊಂಡು 21 ಲಕ್ಷ ಪರಿಹಾರ ನೀಡಿರುತ್ತಾರೆ. ದಾವ ಆಸ್ತಿಗೆ ಸಂಬಂದಪಟ್ಟ ದಾಖಲಾತಿಗಳನ್ನು 9 ನೇ ಪ್ರತಿವಾದಿಗೆ ನಾನೇ ತಯಾರು ಮಾಡಿ ನೀಡಿರುತ್ತೇನೆ. ಆ ಸಮಯದಲ್ಲಿ ನಮ್ಮ ಕುಟುಂಬದ ಸದಸ್ಯರ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ನಿ ಪಿ 25 ರಂತೆ ನಾನು 9 ನೇ ಪ್ರತಿವಾದಿ ಪ್ರಾಧಿಕಾರಕ್ಕೆ ವಂಶವೃಕ್ಷ ಸಲ್ಲಿಸಿರುತ್ತೇನೆ. ನಿ ಪಿ 25 ರಲ್ಲಿ ಅನಿಲ್ ರವರ ಹೆಂಡತಿಯ ಹೆಸರನ್ನು ತೋರಿಸಿರುವುದಿಲ್ಲ. ನಿ ಪಿ 26 ರಿಂದ 28 ರಂತೆ ನಾನು ನನ್ನ ಸಹೋದರ ಮತ್ತು ಸಹೋದರಿಯರ ಬಳಿ ಒಪ್ಪಿಗೆ ಪತ್ರ ಬರೆಸಿಕೊಂಡಿರುತ್ತೇನೆಂದರೆ ಸರಿ. ನಿ ಪಿ 28 ರಲ್ಲಿ ಗಿರೀಶ್ ರವರ ಸಹಿ ಇರುವುದಿಲ್ಲ ಎಂದರೆ ಸರಿ. 9 ನೇ ಪ್ರತಿವಾದಿ ಪ್ರಾಧಿಕಾರದಿಂದ ಹಣ ಪಡೆಯುವ ಉದ್ದೇಶದಿಂದ ಮೋಸದಿಂದ ಅನಿಲ್ ಜೆ ರವರ ಹೆಂಡತಿಯ ವಾದಿಯ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಅನಿಲ್ ಜೆ ರವರು ಪಾವನಿ ಎಂಬುವವರನ್ನು ಮದುವೆಯಾಗಿದ್ದರೆ ಅವರ ಹೆಸರನಾದರು ನಮೂದಿಸಬಹುದಿತ್ತು ಆದರೆ ಉದ್ದೇಶ ಪೂರ್ವಕವಾಗಿ 1 ನೇ ವಾದಿಯ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಹೇಳುವ ಉದ್ದೇಶದಿಂದ ಪಾವನಿ ಎಂಬ ಹೆಸರನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರ ಸರಿಯಲ್ಲ.

ಮದುವೆಯಾದ ನಂತರ ಅನಿಲ್ ರವರು ಹೇಗೆ ಜೀವನ ನಡೆಸುತ್ತಿದ್ದರು ಎಂದು ಗೊತ್ತಿಲ್ಲ. ಅನಿಲ್ ರವರಿಗೆ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅವರು ಮದುವೆಯಾಗುವ ಕಾಲಕ್ಕೆ ಇನ್ನೂ ಮದುವೆ ವಯಸ್ಸು ಆಗಿರಲಿಲ್ಲ. ಮದುವೆ ವಯಸ್ಸಿಗೆ ಬಂದ ನಂತರ ಮದುವೆ ನೋಂದಾಣಿ ಮಾಡಿಸಿರುತ್ತಾರೆ. ಅನಿಲ್ ರವರು ಪಾವನಿಯವರನ್ನು ಮದುವೆಯಾಗುವಾಗ 18 ವರ್ಷಗೆ ಇನ್ನೂ 10-15 ದಿನ ಕಮ್ಮಿ ಇತ್ತು. ಅನಿಲ್ ರವರು ಮದುವೆಯಾದ ದಿನಾಂಕ ನೆನಪಿಲ್ಲ. ನಾನು ಅನಿಲ್ ರವರು ಮದುವೆಯಾದಾಗ ಅವರನ್ನು ಮತ್ತು ಅವರ ಹೆಂಡತಿಯನ್ನು ನೋಡಿರುತ್ತೇನೆ. ಪಾವನಿಯವರು ಮೂಲ ಸಕಲೇಶಪುರದವರು ಇರುತ್ತಾರೆ. ನಾನು ಆನೇಮಹಲ್ ಗ್ರಾಮದವನು ಇರುತ್ತೇನೆ. ಪಾವನಿಯವರ ತಂದೆಯ ಹೆಸರು ಪಾಪಣ್ಣ ಮತ್ತು ತಾಯಿಯ ಹೆಸರು ಪಾರ್ವತಿ ಎಂದು ಇರಬಹುದು ನೆನಪಿಲ್ಲ. ಅವರನ್ನು ನಾನು ಹುಟ್ಟಿದಾಗಿನಿಂದ ನೋಡಿರುತ್ತೇನೆ.

ಪಾಪಣ್ಣರವರಿಗೆ ಮೂರು ಜನ ಮಕ್ಕಳು ಇರುತ್ತಾರೆ. ಪಾಪು, ವಾದಿ (ಹೆಸರು) ಮತ್ತು ಪಾವನ ಎಂದು ಇರುತ್ತದೆ. ನನಗೆ ಹೆಸರುಗಳು ನಿಖರವಾಗಿ ಗೊತ್ತಿಲ್ಲ. ಅವರು ಎಲ್ಲಾರು ಜೀವಂತ ಇರುತ್ತಾರೆ. ಪಾವನ ರವರು ಎಲ್ಲಿ ವಾಸ ಇರುತ್ತಾರೆ ಗೊತ್ತಿಲ್ಲ. ಅವರು ಇನ್ನೊಂದು

ಮದುವೆಯಾಗಿ ಹೋಗಿರುತ್ತಾರೆ. ಪಾಪಣ್ಣನವರ ಮೂಲಕ ಪಾವನ ರವರ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಈ ದಾವೆ ದಾಖಲಾದ ನಂತರ ಪಾವನ ರವರ ಬಗ್ಗೆ ವಿಚಾರ ಮಾಡಿರುವುದಿಲ್ಲ. ಪಾವನ ರವರಿಗೆ 18 ವರ್ಷ ವಯಸಾಗಿತ್ತು. ಅನಿಲ್ ಮತ್ತು ಪಾವನ ರವರ ದಾಂಪತ್ಯದಲ್ಲಿ ಮಕ್ಕಳು ಜನಿಸಿರಲಿಲ್ಲ. ಅವರು ಸಕಲೇಶಪುರ ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ಮದುವೆಯಾದಾಗ ನಾನು ಹೋಗಿರಲಿಲ್ಲ. ಅವರ ಮದುವೆ ಯಾರು ಮಾಡಿಸಿರುತ್ತಾರೆ ಎಂದು ಗೊತ್ತಿಲ್ಲ. ಮದುವೆ ನೋಂದಾಣಿ ಮಾಡಿಸುವಾಗ ಸರ್ಕಾರಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಅನಿಲ್ ರವರು 1998 ರಲ್ಲಿ ಮನೆ ಬಿಟ್ಟು ಹೋಗಿರುತ್ತಾರೆ. ಮದುವೆಯಾಗುವ 15 ದಿನ ಮುಂಚೆಯೇ ಮನೆ ಬಿಟ್ಟು ಹೋಗಿರುತ್ತಾರೆ.

ಅನಿಲ್ ರವರ ನೋಂದಾಣಿ ಮದುವೆಯಾದಾಗ ನಮ್ಮ ತಾಯಿ ಜೀವಂತವಾಗಿದ್ದರು. 1 ರಿಂದ 4 ಮತ್ತು 5 ರಿಂದ 8 ನೇ ಪ್ರತಿವಾದಿಗಳು ನನ್ನ ಪರವಾಗಿ ನಿ ಡಿ 1 ಹಕ್ಕು ಖಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ ಡಿ 1 ಪತ್ರ ಸೃಷ್ಠಿತ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಅನಿಲ್ ರವರ ಮದುವೆಗೆ ನಮ್ಮ ಒಪ್ಪಿಗೆ ಇರಲಿಲ್ಲ. ನಿ ಡಿ 1 ರಲ್ಲಿ ಅನಿಲ್ ಮತ್ತು ಪಾವನಿಯವರು ಮದುವೆಯಾಗಿದ್ದು ಅವರು ಪ್ರತ್ಯೇಕವಾಗಿ ವಾಸವಾಗಿರಲು ಸಮ್ಮತಿ ಸೂಚಿಸಿರುವುದಾಗಿ ಬರೆದಿರುತ್ತಾರೆ ಎಂದರೆ ಸಾಕ್ಷಿ ಅವರು ನಮ್ಮ ಬಳಿ ಮತ್ತು ತಾಯಿಯ ಬಳಿ ಗಲಾಟೆ ಮಾಡಿದ್ದರಿಂದ ಆ ರೀತಿ ಬರೆಸಿರುತ್ತೇವೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**
**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**